Reg No. M 1299) Daily & Weekly (Founded 1917

ಸತ್ಯವಾದಿ
SATYAVADI

ಸಂ ಪುಟ 27 ಸಂಚಿಕ 49 } ಶುಕ್ರವಾರ 19—11—43 [3 ಪೈ

.... ರೇಷನಿಂಗ್ ವಿಧಾನದ ಹತ್ತು ಅಂಶಗಳು ....

ನಮ್ಮ ಸರ್ಕಾರದವರು ಇನ್ನು ಮುಂದೆ ಸಂಸ್ಥಾನದ ಅನೇಕ ದೊಡ್ಡ ಊರುಗಳಲ್ಲಿ ಆಹಾರ ಪದಾರ್ಥಗಳನ್ನು ರೇಷನಿಂಗ್ ವಿಧಾನದ ಮೂಲಕ ಹಂಚಲು ನಿರ್ಧರಿಸಿದ್ದಾರಷ್ಟೆ. ಯಾವುದಾದರೂ ಊರಿಗೆ ರೇಷನಿಂಗ್ ವಿಧಾನವು ಬರುತ್ತದೆಯೆಂದರೆ ಅಲ್ಲಿನ ಜನರ ಮನಸ್ಸಿನಲ್ಲಿ ನಾನಾ ವಿಧವಾದ ಇಲ್ಲದ ಸಲ್ಲದ ಊಹಾಪೋಹಗಳು ಉಂಟಾಗುತ್ತವೆ. ಈ ವಿಧಾನದ ಉದ್ದೇಶಗಳಾವುವು? ಅದರಿಂದ ಪ್ರಯೋಜನಗಳು ಯಾವುವು? ಮುಂತಾದ ವಿಷಯಗಳನ್ನು ಸ್ವಲ್ಪವಾದರೂ ತಿಳಿಯದ ಜನರು ದಪ್ಪಗಂಟಲುಗಳಲ್ಲಿ ತಮ್ಮ ಮನಸ್ಸಿಗೆ ಬಂದಂತೆ ಏನೇನೋ ಹೇಳಿ ಇತರರ ಮನಸ್ಸನ್ನೂ ಕದಡಿ ಅಂದೋಳನವನ್ನುಂಟುಮಾಡುತ್ತಾರೆ. ಆದುದರಿಂದ ರೇಷನಿಂಗ್ ವಿಧಾನದ ಒಗ್ಗೆ ಕೆಲವು ಅಂಶಗಳನ್ನು ತಿಳಿಸಬೇಕಾದುದು ಅವಶ್ಯಕವಾಗಿದೆ. ಇಂಡಿಯಾ ಸರಕಾರದವರು ಪ್ರಾಂತೀಯ ಸರಕಾರಗಳಿಗೆ ರೇಷನಿಂಗ್ ವಿಧಾನಕ್ಕೆ ಸಂಬಂಧಪಟ್ಟ ಹತ್ತು ಅಂಶಗಳನ್ನು ತಿಳಿಯಪಡಿಸಿದ್ದಾರೆ, ಆ ಹತ್ತು ಅಂಶಗಳು ನಮ್ಮ ಸಂಸ್ಥಾನಕ್ಕೂ ಅನ್ವಯಿಸುತ್ತವೆ.

೧. ಮೊಟ್ಟ ಮೊದಲನೆಯದಾಗಿ ಆಹಾರ ಪದಾರ್ಥಗಳ ರೇಷನಿಂಗ್ ವಿಧಾನವನ್ನು ಜಾರಿಗೆ ತರುವುದರ ಉದ್ದೇಶವು ಜನರ ತಿನ್ನುವಿಕೆಯನ್ನು ಕಡಿಮೆ ಮಾಡಬೇಕೆಂಬುದಲ್ಲ. ಸದ್ಯದಲ್ಲಿ ಕಡಿಮೆಯಾಗಿರತಕ್ಕ ಆಹಾರ ಪದಾರ್ಥಗಳನ್ನು ಎಲ್ಲರಿಗೂ ದೊರಕುವಂತೆ ಹಂಚಬೇಕೆಂಬುದೇ ಆಗಿದೆ.

ಆದಂಲ್ಲಿಯೂ ಆಹಾರ ಪದಾರ್ಥಗಳು ಕಡಿಮೆಯಾಗಿದ್ದೂ, ಅವುಗಳ ಸರಪರಾಜುಗಳೂ ಅಕ್ರಮವಾಗಿದ್ದರೆ ಅಂತಹ ಸಂದರ್ಭದಲ್ಲಿ ಸಮಸ್ತರಿಗೂ ಆಹಾರ ಪದಾರ್ಥಗಳನ್ನು ಹೆಚ್ಚು ಕಡಿಮೆಯಿಲ್ಲದಂತೆ ಹಂಚಬೇಕೆಂದರೆ ಆ ಪದಾರ್ಥಗಳ ಮೇಲೆ ಒಲವಾದ ಹತೋಟಿಯನ್ನಿಟ್ಟು ರೇಷನಿಂಗ್ ವಿಧಾನವನ್ನು ಜಾರಿಗೆ ತರಬೇಕಾದುದು ಅತ್ಯಗತ್ಯವೇ ಆಗುತ್ತದೆ

೨. ರೇಷನಿಂಗ್ ವಿಧಾನವನ್ನು ತರಲು ಪದಾರ್ಥಗಳ ಧಾರಣೆವಾಸಿಗಳ ಮೇಲೆ ಹತೋಟಿಯನ್ನಿಟ್ಟುಕೊಳ್ಳಬೇಕಾಗುತ್ತದೆ. ರೇಷನಿಂಗ್ ವಿಧಾನವು ದೇಶವ್ಯಾಪ್ತಿಯಂತೆಯೂ ಜಾರಿಗೆ ಒಂದಿದ್ದರೂ ಸಹ, ಪ್ರತಿಯೊಬ್ಬರಿಗೂ ಒಂದೇ ಪ್ರಮಾಣದಲ್ಲಿ ಏರುಪೇರಗಳಿಲ್ಲದಂತೆ ಆ ಪದಾರ್ಥಗಳು ಹಂಚಿಕೆಯಾಗಬೇಕಾದರೆ ದೇಶದಲ್ಲಿನ ಪ್ರತಿಯೊಬ್ಬನೂ ತನ್ನ ರೇಷ್ ವಸ್ತುಗಳನ್ನು ಕೊಂಡುಕೊಳ್ಳಲು ಅನುಕೂಲವಾಗುವಂತೆ ಧಾರಣೆವಾಸಿಗಳು ಕಡಿಮೆಯಾಗಿರಬೇಕು. ಆದುದರಿಂದ ಧಾರಣೆಗಳ ಹತೋಟಿಯು ಅವಶ್ಯಕವಾಗುವುದು. ಇಲ್ಲವಾದರೆ ಶ್ರೀಮಂತರು ತಮ್ಮ ರೇಷ್ ಕೋಟಾವನ್ನು ಕೊಂಡುಕೊಳ್ಳುವರು: ಬಡವರು ತೆಪ್ಪಗಿರಬೇಕಾಗುವುದು! ಇಂತಹ ಪರಿಸ್ಥಿತಿಯುಂಟಾಗದಿರಲೆಂದೇ ಧಾರಣೆವಾಸಿಗಳ ಹತೋಟಿಯನ್ನು ಸರಕಾರದವರು ಇಟ್ಟುಕೊಳ್ಳುವುದು.

೩. ಆಹಾರ ಪದಾರ್ಥಗಳ ರೇಷನಿಂಗ್ ವಿಧಾನಗಳ ತತ್ವದಲ್ಲಿಯೂ, ಕಾರ್ಯರೂಪದಲ್ಲಿಯೂ ಒಂದೇ ಸಮನಾಗಿರಬೇಕು. ಏರುಪೇರುಗಳಿರಲೇಕೂಡದು. ನಿಪುಣರು ಗೊತ್ತುವಳಿ ಮಾಡಿ, ಮೇಲ್ವಿಚಾರಣೆ ನಡೆಸುತ್ತಿರುವ ರೇಷನಿಂಗ್ ವಿಧಾನವನ್ನು ದೇಶದ ಆದ್ಯಂತವೂ ಜಾರಿಗೆ ತಂದಲ್ಲಿ ಅದು ಫಲಪ್ರದವಾಗಿ ನಡೆದು ನಡೆದು ಪದಾರ್ಥಗಳು ಪೋಲಾಗುವುದು ತಪ್ಪುತ್ತದೆ.

೪. ಆಹಾರ ಪದಾರ್ಥಗಳ ರೇಷನಿಂಗ್ ವಿಧಾನವು ಸಮಗ್ರವಾಗಿರಬೇಕು. ಮುಂದೆ ಈ ವಿಧಾನವನ್ನು ಎಷ್ಟು ದೂರ ವಿಸ್ತರಿಸಬೇಕಾಗಬಹುದೆಂಬುದನ್ನು ಮುಂದಾಗಿಯೇ ಆಲೋಚಿಸಿ ನಿರ್ಧರಿಸಿಕೊಂಡು, ಅದಕ್ಕೆ ತಕ್ಕಂತೆ ಕೆಲಸಕಾರ್ಯಗಳನ್ನು ಗೊತ್ತುಪಡಿಸಬೇಕು.

ವಿಷಯಗಳನ್ನೆಲ್ಲಾ ಪರಿಶೀಲಿಸಿಯೇ ನಮ್ಮ ಸರಕಾರದವರು ಈ ಇಲಾಖೆಯಲ್ಲಿ ಕೆಲಸಮಾಡುವವರಿಗೆ ಆಗಿಂದಾಗ್ಗೆ ಹೀಗೆಹೀಗೆಯೇ ಕೆಲಸಮಾಡಬೇಕೆಂದು ಸಲಹೆಗಳನ್ನು ಕೊಟ್ಟು, ರೇಷನಿಂಗ್ ಸಂಬಂಧಪಟ್ಟ ನಮೂನೆ ಫಾರಂಗಳನ್ನೂ ರೇಷ್ ಕಾರ್ಡುಗಳನ್ನೂ ತಯಾರ್ಮಾಡಿರುತ್ತಾರೆ.

ಹಿಂದುಳಿದವರು ಮುಂದೆ ಬರಲಿಲ್ಲ

ಸರಕಾರದ ಪಬ್ಲಿಸಿಟಿ ಆಫೀಸರು ಹೊರಡಿಸಿರುವ ಒಂದು ನೋಟಫಿಕೇಷನ್ ಪ್ರಕಾರ ಈ ವಿಷಯ ಹೊರಪಟ್ಟಿದೆ— ಶ್ರೀ ಜಯ ಚಾಮರಾಜೇಂದ್ರ ಆಕ್ಯಪೇಷನಲ್ ಇನ್‌ಸ್ಟಿಟ್ಯೂಟಿನಲ್ಲಿ ವಿದ್ಯಾಭ್ಯಾಸ ಮಾಡಲು ವಿದ್ಯಾರ್ಥಿಗಳಿಗಾಗಿ ಜಾಹಿರಾತು ಕೊಟ್ಟಿವು. ಹಿಂದುಳಿದವರು ಅತ್ಯಲ್ಪ ಮಂದಿ ಅರ್ಜಿಹಾಕಿದರು. ಇವರಲ್ಲಿ ಬಹು ಕಡಮೆ ಮಂದಿ ಭೇಟಿಗೆ ಬಂದರು. ಭೇಟಿಯಲ್ಲಿ ಚುನಾಯಿತರಾದವರಲ್ಲಿ ಅನೇಕರು ವ್ಯಾಸಂಗಮಾಡಲು ಬರಲೇ ಇಲ್ಲ. ಹೀಗಾಗಿ ಚುನಾಯಿತರಾದ 169 ಮಂದಿಯಲ್ಲಿ ಹಿಂದುಳಿದವರು 26 ಮಂದಿ ಮಾತ್ರ!

ಈ ವಿಷಯದಲ್ಲಿ ಮೊನ್ನೆ ನಡೆದ ಪ್ರಜಾಪ್ರತಿನಿಧಿಸಭೆಯಲ್ಲಿ ದೀರ್ಘ ಚರ್ಚೆ ನಡೆದಿತ್ತು.

ಸಮಾಚಾರ ಸಂಗ್ರಹ

ಬ್ರಿಟನ್‌ದಿಂದ ನಿನ್ನೆ ಬ್ರಿಟಿಷ್ ಮತ್ತು ಅಮೇರಿಕನ್ ವಿಮಾನಗಳು ಬರ್ಲಿನ್ ನೇಲೆ ಹೆಚ್ಚು ಸಂಖ್ಯೆಯಲ್ಲಿ ಹೋಗಿ ಪ್ರಪಂಚದಲ್ಲಿ ಬಹು ಭಾರಿ ರೆಪಾಯ್ನ ಕಾರ್ಖಾನೆಯನ್ನು ನಾಶಮಾಡಿದವು.

ಭಾರತದಲ್ಲಿರುವ ಚೀನಿ ಸೇನೆಗಳು ಬರ್ಮಾರಸ್ತೆಯಲ್ಲಿ ಅಸ್ಸಾಂನ ರಸ್ತೆಯಿಂದ ಸುಮಾರಾದ 26-34 ಮೈಲಿ ಭೂಪ್ರದೇಶವನ್ನು ಆಕ್ರಮಿಸಿದರು.

ಇಟಲಿಯ ಮಧ್ಯಮ ಆಲಫ್ಟೈನ್ ಬೆಟ್ಟದ ಸವಿಾಪದಲ್ಲಿ ಭಾರತೀಯ ಸೇನೆಗಳು ಜರ್ಮನಿಯರ ಸಂಗಡ ಯುದ್ಧ ಮಾಡುತ್ತಿರುವವು.

ಈಗ ಬಂದ ವಾರ್ತೆಯಿಂದ ಸೀಡ ನ ಬರ್ಲಿನ್ ಟೆಲಿಗ್ರಾಫ್ ಕತ್ತರಿಸಲ್ಪಟ್ಟಿದೆ ಯೆಂದು ತಿಳಿಯಬಂದಿದೆ.

ಜಮಖಂಡಿಯು ಕನ್ನಡ ಸಂಸ್ಥಾನವಾಗಿರುವದರಿಂದ ಅಲ್ಲಿಯ ಪ್ರಜೆಗಳು ಮಹಾರಾಷ್ಟ್ರ ವಿಶ್ವವಿದ್ಯಾಲಯಕ್ಕೆ ಸೇರಲು ಮನಸ್ಸು ಮಾಡುವದಿಲ್ಲವೆಂದು ಕನ್ನಡ ಪ್ರಮುಖರು ಪ್ರಕಟಿಸಿದ್ದಾರೆ.

ತಿರುವೂರ್ ಖಾದಿ ಒಪ್ಪಿಯನ್ನು ಇನ್ನು ಮುಂದೆ ಈಗಿನ ದರದಲ್ಲಿ ರೂಪಾಯಿಗೆ ಎರಡಾಣೆಯಂತೆ ಕಮ್ಮಿ ಮಾಡುವರು.

ವಿ|| ಅಮರಿಯನ್ನು ಕೆಲಸದಿಂದ ವಜಾಮಾಡಿರೆಂದು ವಿ| ಫೆಸ್ಟರ್ ಬ್ರಾಕ್ ನೇಸ್‌ರು ಪ್ರಚಾರನಾಡುತ್ತಿರುವರು.

ಇಟಲಿಯಲ್ಲಿ ಮಳೆ ಒಂದೇ ಸಮ ಸುರಿಯುತ್ತದೆ. ಬ್ರಿಟಿಷರ ಕಾರ್ಯಚಾರಣೆಗೆ ಸ್ವಲ್ಪ ಅಡ್ಡಿಯಾಗಿದೆ.

ರೋಂನಗರವನ್ನು ತಾವು ಮುಟ್ಟಿದ ಕೂಡಲೆ ಕೆಲಸಕ್ಕೆ ರಾಜೀನಾಮೆ ಕೊಡುವುದಾಗಿ ಇಟಲಿಯ ಪ್ರಧಾನ ಮಂತ್ರಿ ಮೂರ್ಸಲ್ ಒಡೋಲಿಯ ಹೇಳುತ್ತಾನೆ.

ಚೀನದ ಯಾಂಗತ್ಸೀ ಪ್ರಾಂತದಲ್ಲಿ ಜಪಾನರ ಸೈನ್ಯವು ಪ್ರಗತಿಹೊಂದುತ್ತಲಿರುವುದೆಂದು ಸುದ್ದಿ ಬಂದಿದೆ. ಕೆಲವು ಮುಖ್ಯ ಸ್ಥಳಗಳನ್ನು ಆಕ್ರಮಿಸಿದ್ದಾರೆ.

ಸಿಲೋನದ ಮಂತ್ರಿಗಳಾದ ಸೇನಾನಾಯಕರು ಶೀಘ್ರವಾಗಿಯೇ ಇಂಗ್ಲಂಡಿಗೆ ಪಯಣ ಬೆಳಸುತ್ತಾರೆ. ಸಿಲೋನಕ್ಕೆ ಬೇಕಾಗಿರುವ ಸ್ವರಾಜ್ಯದ ಘಟನೆಯು ಮಂತ್ರಿಮಂಡಲದಿಂದ ಸಿದ್ಧವಾಗಿದ್ದು ಬ್ರಿಟಿಶ್ ಸರಕಾರದೊಡನೆ ಇದನ್ನು ಚರ್ಚಿಸುವವರಿದ್ದಾರೆ.

ಮಿತ್ರರಾಷ್ಟ್ರಗಳಲ್ಲಿಕೊಂಡುಕೊಳ್ಳುವ ತಶ್ವಕ್ಕನುಸಾರವಾಗಿ ಬ್ರಿಟನ್ನು ಇದುವರೆಗೆ ಆಯಾ ರಾಷ್ಟ್ರಗಳಿಂದ ತಾನು ತಕ್ಕೊಂಡದ್ದಕ್ಕಿಂತ ೨೦೫ ಕೋಟಿ ಪೌಂಡು ಹೆಚ್ಚಿಗೆ ಅವುಗಳಿಗೆ ಕೊಟ್ಟಿದೆಯಂತೆ.

ಅಮೇರಿಕೆಯವರಿಗೆ ವಿಮಾನದಳವು ತ್ತು ನಾವಿಕದಳ ಕಟ್ಟುವದಕ್ಕೆ ಆಸ್ಟ್ರೇಲಿಯದ ಭೂಮಿ ಪಡೆಯುವ ಬಗ್ಗೆ ಸಂಧಾನ ನಡೆದಿರುವದೇನೆಂದು ಕೇಳಿದ್ದಕ್ಕೆ ಆಸ್ಟ್ರೇಲಿಯನ್ ಪ್ರಧಾನಿ ಕರ್ಟನ್ನರು ಇಲ್ಲವೆಂದು ಹೇಳಿದರು.

ಈಗ ದೇಶದಲ್ಲಿ ಎಷ್ಟೋ ವಸ್ತುಗಳು ಕಡಿಮೆ ಬಿದ್ದಿರುವುದರಿಂದ ಅವುಗಳಿಗೆಲ್ಲಾ ರೇಷನಿಂಗ್ ವಿಧಾನವು ಜಾರಿಗೆ ಬಂದಿದೆ. ಆದರೆ ಆ ವಸ್ತುಗಳ ರೇಷನಿಂಗಗೂ, ಆಹಾರ ಪದಾರ್ಥಗಳ ರೇಷನಿಂಗ್ ವ್ಯವಸ್ಥೆಗೂ ಸ್ವಲ್ಪವೂ ಸಂಬಂಧವಿಲ್ಲ.

೫. ಆಹಾರಪದಾರ್ಥಗಳ ಮೇಲೆ ಹತೋಟಿಯನ್ನಿಟ್ಟುಕೊಳ್ಳಬೇಕಾದರೆ ಕಾನೂನುಗಳಾಗಬೇಕು. ಸರಕಾದವರು ರೇಷನಿಂಗ್ ವಿಧಾನವನ್ನು ಜಾಜಿಗೆ ತರಬೇಕಾದರೆ, ಪ್ರಜೆಗಳ ಸಂಖ್ಯೆಯನ್ನು ಎಣಿಕೆ ಮಾಡಲು, ರಿಜಿಸ್ಟ್ರೇಷನ್ ಮಾಡಲು, ಹಂಚಲು, ಅವರಿಗೆ ಅಧಿಕಾರಿಗಳು ಇರಬೇಕು. ಆವರು ಈ ಈ ಅಧಿಕಾರಗಳನ್ನು ಬಹಳ ಖಡಾಖಂಡಿತವಾಗಿ ಪ್ರಯೋಗಿಸಬೇಕು. ಆದುದರಿಂದ ಈ ಕೆಲಸಕ್ಕಾಗಿ ಪ್ರತ್ಯೇಕವಾದ ಅಧಿಕಾರಿಗಳನ್ನೇ ನೇಮಿಸಬೇಕಾಗುತ್ತದೆ.

ಈಗ ಬ್ರಿಟಿಷ್ ದೇಶದಲ್ಲಿ ಜಾರಿಯಲ್ಲಿರುವ ರೇಷನಿಂಗ್ ಪದ್ಧತಿಯು ಅತ್ಯಮೋಘ ರೀತಿಯಲ್ಲಿ ಜಯಪ್ರದವಾಗಿದೆ ಎಂಬುದು ಎಲ್ಲರಿಗೂ ತಿಳಿದಿದೆಯಷ್ಟೆ. ಅಲ್ಲಿನ ಸರಕಾರದವರು, ರೇಷನಿಂಗ್ ನಿಯಮಗಳನ್ನು ಸರ್ವತೂ ಅನುಸರಿಸುವಂತೆ ಮಾಡಲು ಬಹಳ ಬಲವಾದ ಅಧಿಕಾರ ವರ್ಗವನ್ನು ನೇಮಕ ಮಾಡಿದ್ದಾರೆ. ಲಂಡನ್ ನಗರ ಒಂದರಲ್ಲೇ ಆಹಾರ ಪದಾರ್ಥಗಳಿಗೆ ಸಂಬಂಧಪಟ್ಟ ತಕ್ಸೀರು ಗಳು ಸರಾಸರಿ ತಿಂಗಳಿಗೆ 600 ರಂತೆ ಕೋರ್ಟಿಗೆ ಒಂದು ತಕ್ಸೀರು ಮಾಡಿದವರಿಗೆ ಭಾರಿ ಶಿಕ್ಷೆಗಳನ್ನೂ ಭಾರಿ ಜುಲ್ಮಾನೆಗಳನ್ನೂ ಕಠಿಣ ಸಜಾಗಳನ್ನೂ ವಿಧಿಸುತ್ತಿದ್ದಾರೆ. ಒಂದು ಬಾರಿ ಒಬ್ಬ ತಕ್ಸೀರುದಾರನಿಗೆ ವಿಧಿಸಲ್ಪಟ್ಟ ಒಂದೇ ಒಂದು ಜುಲ್ಮಾನೆಯು ಮೂರೂವರೆ ಲಕ್ಷ ರೂಪಾಯಿಗಳು !

೬ ರೇಷನಿಂಗ್ ಜಾರಿಗೆ ಬರುವ ಪ್ರತಿಯೊಂದು ಊರಿನಲ್ಲಿಯೂ ಸ್ಥಳೀಯ ಆಹಾರ ಸಲಹಾ ಸಮಿತಿಗಳನ್ನೂ, ಆಹಾರ ಪದಾರ್ಥ ಹತೋಟಿ ಸಮಿತಿಗಳನ್ನೂ ರಚಿಸಬೇಕು. ಆ ಸಮಿತಿಗಳಲ್ಲಿ ವ್ಯಾಪಾರಿಗಳ, ಪದಾರ್ಥವನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸುವವರ, ಹಂಚತಕ್ಕವರ ಹೋಟಲುಗಳವರ, ಪ್ರಜಾಹಿತ ಚಿಂತಕರ ಪ್ರತಿನಿಧಿಗಳಿರಬೇಕು.

೭. ಆಹಾರ ಪದಾರ್ಥಗಳ ರೇಷನಿಂಗ್ ವಿಧಾನವನ್ನು ನೋಡಿಕೊಳ್ಳುವುದಕ್ಕೆ ನೇಮಿಸಲ್ಪಡುವ ಅಧಿಕಾರಿಗಳು ಅತ್ಯಂತ ದಕ್ಷರಾಗಿರಬೇಕು. ಅವರಿಗೆ ಅಧಿಕಾರ ನಡೆಸತಕ್ಕ ಜಾಣ್ಮೆಯಿರಬೇಕು, ನಂಬಿಕೆಗೆ ಆರ್ಹರಾಗಿರಬೇಕು. ಈ ಗುಣಗಳಿಲ್ಲದವರನ್ನು ಈ ಕೆಲಸಕ್ಕೆ ನೇಮಿಸಬಾರದು.

೮. ಪ್ರಜೆಗಳ ಆಹಾರ ಸಮಸ್ಯೆಗೆ ಸಂಬಂಧಪಟ್ಟ ವಿಷಯಗಳಲ್ಲಿ ಆಡಳಿತ ವರ್ಗವು ಅತ್ಯಂತ ಚುರುಕಾಗಿ, ಅಂದರೆ ಕಾಲವಿಳಂಬಗ ಅವಕಾಶ ಕೊಡದೆ ವಿದ್ಯುದ್ವೇಗದಲಿ ಕೆಲಸ ಮಾಡಬೇಕು, ಇವರ ಊಹಾಶಕ್ತಿಯು ತೀವ್ರವಾಗಿರಬೇಕು. ಮೇಲ್ವಿಚಾರಣಾ ಕ್ರಮವೂ ಹತೋಟಿ ವಿಧಾನವೂ ಲೋಪರಹಿತವಾಗಿ ಸಮಗ್ರವಾಗಿರಬೇಕು.

ಆಹಾರವಸ್ತುಗಳ ಸರಬರಾಜಿಗೂ, ಹಂಚಿಕೆಗೂ, ಸೆಸರುಗೊಂಡ ಟೋಕು ವ್ಯಾಪಾರಿಗಳನ್ನೂ ಚಿಲ್ಲರೆವಿಂಗಡಿ ವರ್ತಕರನ್ನೂ ಉಗಯೋಗಿಸಿಕೊಳ್ಳಬೇಕು. ಇವರ ಜತೆಗೆ ಸರ್ಕಾರದವರೇ ಏರ್ಪಡಿಸಿರುವ ಗ್ರೈಕ ಡಿವೋಗಳು ಸಹ ಪದಾರ್ಥಗಳ ಹಂಚಿಕೆಯನ್ನು ಮಾಡಬೇಕು.

೯. ಮುಖ್ಯವಾದ ಆಹಾರ ಪದಾರ್ಥಗಳನ್ನು ಸರ್ಕಾರದವರು ದಾಸ್ತಾನು ಮಾಡಿಕೊಂಡಿದ್ದು, ಅವುಗಳನ್ನು ಲೋಪಬಾರದಂತೆ ಕ್ರಮವಾಗಿ ಅಂಗಡಿಗಳಿಗೆ ಕೊಟ್ಟು ಪ್ರಜೆಗಳಿಗೆ ದೊರಕುಮಾಡಬೇಕು.

೧೦. ವೃತ್ತ ಪತ್ರಿಕೆಗಳ ಸಹಾಯವನ್ನೂ, ಬೆಂಬಲವನ್ನೂ ಪಡೆಯಬೇಕು. ಆಹಾರ ವಸ್ತುಗಳ ರೇಷನಿಂಗ್ ವಿಧಾನವು ಯಶಸ್ವಿಯಾಗಲು ಪತ್ರಿಕೆಗಳ ನೆರವು ಬಹಳ ಸಹಾಕಯವಾಗಿರುತ್ತದೆ. (ರಾ. ರ.)

Opera Talkies -- KrishnaPrema

ಆಪೇರಾ ಟಾಕೀಸ್ 4 ನೇ ಯಶಸ್ವಿವಾರ

ಭಾನುಮತಿ, ಸೂರ್ಯಕುಮಾರಿ, ಶಾಂತಿಕುಮಾರಿ, ಅಪ್ಪಂಕಿ ಮತ್ತು ಮೈಸೂರಿನ ಹಿರಣ್ಣಯ್ಯ ಪಾತ್ರವಹಿಸಿರುವ

ಕೃಷ್ಣಪ್ರೇಮ

(ತೆಲಗು ಭಾಷೆಯಲ್ಲಿ)

2 ನೇ ಅಮೋಘ ವಾರ ಶ್ರೀಪರಶುರಾಂ ಹಾಲ್
ರಣಜಿತ್ ಟಾಕೀಸ್ — ಪ್ರೊಪ್ರೈಟರ್ಸ್ —
ಫೋಂಡೋಜಿರಾವ್ ಆಂಡ್ ಸನ್ಸ್
ಸಯ್ಯಾಜಿರಾವ್ ರೋಡ್, ಮೈಸೂರು.

Ranjit — Guest

ಮಾಧುರಿ, ಈಶ್ವರಲಾಲ್,
ಪಣಿಂ, ರಾಮಶುಕ್ಲ
ಮುಂತಾದವರು ಪಾತ್ರವಹಿಸಿರುವ

.... ಗೆಸ್ಟ್ ....

ಅಥವಾ

ಮೆಹಮಾನ್

ಅಮೋಘ ಕಲಾಕೃತಿ (ಹಿಂದಿ)

Laksbminarasimha Press

Artistic & Colour Printing a Sepciality

Srirampet, Mysore

ನಮ್ಮಲ್ಲಿ ಎಲ್ಲಾ ವಿಧವಾದ ಬಟ್ಟೆಗಳೂ ಸರಿಯಾದ ಬೆಲೆಗೆ ದೊರಯುತ್ತವೆ.

ಹೊಲಿಗೆ ಕೆಲಸಗಳನ್ನು ಸಲದಲ್ಲಿ ಚೆನ್ನಾಗಿ ಸುಲಭ ದರದಲ್ಲಿ ಮಾಡಿಕೊಡುತ್ತೇವೆ.

ಅಕ್ಕರ ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಶಕ್ತಿಸುಧಾ

ದೇಹದೌರ್ಬಲ್ಯ ಬಲಹೀನತೆ ಇವಗಳನ್ನು ಹೋಗಲಾಡಿಸಿ ವೀರ್ಯಾಭಿವೃದ್ಧಿ ಮಾಡಿ ದೇಹಕ್ಕೆ ಕಾಂತಿಯನ್ನು ಉಂಟುಮಾಡುತ್ತೆ

ಈವತ್ತೇ ಕೊಂಡು ಉಪಯೋಗಿಸಿರಿ!

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

೧೦೬೭, ಚಾಮರಾಜಪುರಂ ಮೈಸೂರು.

Edited, Printed & published by M. S. Krishna Rao, at the Satyavadi Press. Chamaraja Agrahar, Mysore.